ಶ್ರೀ ಟಿ. ಚನ್ನಯ್ಯ.—ಕೇಳುತ್ತಿದ್ದಾರೆ. ಅದಕ್ಕೇ 28 ಬಾವಿಗಳನ್ನು ತೆಗೆಸಿದೆ. ಇನ್ನೂ ಬೇಕಾದ ಕಡೆ ತೆಗೆಸಲು ಪ್ರಯತ್ನಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹುಕ್‌ವರ್ಮ್‌ನ ವಗ್ಗೆರೆ ಹೆಚ್ಚಿವೆ, ನೀರಿನ ದೋಷ ಹೆಚ್ಚಿದೆ ಎಂದು ಸೇಕಡ ಅರವತ್ತರಷ್ಟು ದೂರುಗಳಿರುವ ಬಗ್ಗೆ ಸರ್ಕಾರಕ್ಕೆ ವರದಿ ಬಂದಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಕೂಡಲೆ 25 ಬಾವಿಗಳಿಗೆ ಅಂದಾಜು ತಯಾರಿಸಿ ನೀರಿಲ್ಲದಿರುವ ಕಡೆಗಳಿಗೆ ನೀರನ್ನೊದಗಿಸುತ್ತೀರಾ?

ಶ್ರೀ ಟಿ. ಚನ್ನಯ್ಯ.—ಬಾವಿ ಇಲ್ಲದಿರುವ ಕಡೆ ತೆಗೆಸಲು ಪ್ರಯತ್ನ ಮಾಡುವುದೇ ಸರ್ಕಾರದ ನೀತಿಯಾಗಿದೆ. ಈಗ 25 ಗ್ರಾಮಗಳಲ್ಲಿ ಬಾವಿ ಇಲ್ಲವೆಂದು ಗೊತ್ತಾಗಿದೆ. ಆ ಸ್ಥಳಗಳಲ್ಲಿ ಬಾವಿ ತೆಗೆಸಲು ಪ್ರಯತ್ನಮಾಡೋಣ.

Backward Classes Families living in Sakalespur, Belur and Alur Taluks.

Q.—66. **Sri H. K. SIDDAIYA** (Belur—Scheduled Castes).—

Will the Government be pleased to state :—

(*a*) the number of families of backward classes living in the taluks of Sakalespur, Belur and Alur in Hassan district ;

(*b*) of these, the number who have no land, the number who have applied for land during the last five years and the number to whom lands have been granted ;

(*c*) the number of backward class families that are living in thatched huts ;

(*d*) from how many villages applications for drinking water wells have been received and how many wells have been provided at present ?

A.—**Sri T. CHANNIAH** (Minister for Public Health and Local Self-Government).—

(*a*), (*b*) and (*c*) No information is available with Government.

(*d*) Applications were received from 196 villages and 140 wells were provided.

ಶ್ರೀ ಎಚ್. ಕೆ. ಸಿದ್ದಯ್ಯ.—(*b*)ಪ್ರಶ್ನೆಗೆ ಉತ್ತರವಾಗಿ "ಸಂಬಂಧಪಟ್ಟ ವಿಷಯವು ಸರ್ಕಾರದವರಲ್ಲಿ ದೊರೆಯುವಂತಿಲ್ಲ." ಎಂದು ಹೇಳಿದ್ದೀರಿ. ಇದರ ಪ್ರಕಾರ ನಾನು ಕೇಳಿರುವ ಹಳ್ಳಿಗಳು ಸರ್ಕಾರಕ್ಕೆ ಸೇರಿಲ್ಲವೆಂದು ನಾನು ತಿಳಿದುಕೊಳ್ಳಬಹುದೇ?

ಶ್ರೀ ಟಿ. ಚನ್ನಯ್ಯ.—ತಾವು ಕೇಳಿರುವ ಪ್ರಶ್ನೆಗೆ ಉತ್ತರ ಕೇಖರಣೆ ಮಾಡಲು ಬಹಳ ಕಾಲಬೇಕು.

ಶ್ರೀ ಎಚ್. ಕೆ. ಸಿದ್ದಯ್ಯ.—ಸರ್ಕಾರದವರು ಅಮೀಲಯೋರೇಷನ್ ಫಂಡನ್ನು ಹಂಚುವಾಗ ಹಾಸನ ಡಿಸ್ಟ್ರಿಕ್ಟಿಗೆ ಬಹಳ ಕಡಮೆ ಕೊಡುತ್ತಿದ್ದಾರೆ. ಮಲೆನಾಡಿನ ತಾಲ್ಲೂಕುಗಳಿಗೆ ಹಾಸನ ಜಿಲ್ಲೆಯಲ್ಲಿ ಈ ಗ್ರ್ಯಾಂಟನ್ನು ಜಾಸ್ತಿಯಾಗಿ ಒದಗಿಸಿ ಅಲ್ಲಿ ಮನೆಯಲ್ಲಿರುವವರಿಗೆ ಸಹಾಯ ನೀಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಅಮೀಲಯೊರೇಷನ್ ಗ್ರ್ಯಾಂಟನ್ನು ಆಯಾ ಜಿಲ್ಲೆಗಳ ಜನಸಂಖ್ಯೆಗನುಗುಣವಾಗಿ ಹಂಚಲಾಗುತ್ತದೆ. ಅದನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಅಮಲ್ದಾರರು ತಾಲ್ಲೂಕುಗಳಿಗೆ ಹಂಚುತ್ತಾರೆ.

ಶ್ರೀ ಎಚ್. ಕೆ. ಸಿದ್ದಯ್ಯ.—140 ಬಾವಿಗಳನ್ನು ಕೊಟ್ಟಿದೆಯೆಂದು ಹೇಳಿದೆ. ಇನ್ನೂ ಅನೇಕರು ಬಾವಿಗಳಿಗೆ ಅರ್ಜಿ ಹಾಕಿದ್ದಾರೆ. ಆದ್ದರಿಂದ ಈ ವರ್ಷ 200 ಬಾವಿಗಳನ್ನಾದರೂ ತೆಗೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಕುಡಿಯುವ ನೀರಿನ ಬಾವಿಗಳಿಲ್ಲದಿರುವ ಕಡೆ ಅವನ್ನು ತೆಗೆಸಲು ಪ್ರಯತ್ನ ಮಾಡುತ್ತೇವೆ.

12-30 P.M.

Hosadurga—Shivaganga Road.

Q.—473. **Sri G. BASAPPA** (Hosadurga).—

Will the Government be pleased to state :—

(*a*) the total length of the road between Hosadurga-Shivaganga Road *via* Jankal ;

(*b*) the number of buses plying on this road daily ;

(*c*) the authority which is maintaining this road ;

(*d*) the amount spent for the maintenance of this road every year from 1952 to 1955 ?

A.—**Sri T. CHANNIAH** (Minister for Public Health and Local Self-Government).—

(*a*) 20 miles.

(*b*) Four.

(*c*) Chitaldrug District Board.

(*d*)—

Year		*Amount spent*
		Rs.
1952-53	...	6,342
1953-54	...	5,900
1954-55	...	4,874
1955-56	...	4,700